Reg.No. M. 1550.
KODAGU" MERCARA, (Coorg).



# ಕೊಡಗು

ಸಂಪಾದಕರು:–ಶ್ರೀ ಪಿ. ಐ. ಬೆಳ್ಯಪ್ಪ, ವಾರ್ಷಿಕ ಚಂದಾ: ರೂ: ೩–೮–೦.

ಸಂಪುಟ ೨೩ | ತಾರೀಕು ೨೩—೨—೧೯೪೫ನೇ ಶುಕ್ರವಾರ. | ಸಂಚಿಕೆ ೩೮

## ಕಸ್ತೂರ್ಬಾ ನಿಧಿ ಹೇಗೆ ವಿನಿಯೋಗಿಸಬೇಕು?

ಪಧ್ಯದಲ್ಲಿ ಶಾ. 18 ರಲ್ಲಿ ಸೇರಿದ್ದ ಕಸ್ತೂರ್ ಬಾ ನಿಧಿಯ ಪ್ರಾಂತೀಕ ಕಾರ್ಯದರ್ಶಿಗಳ ಸಭೆಯಲ್ಲಿ ಮಹಾತ್ಮಗಾಂಧೀಜಿಯವರು ಇದರ ಧ್ಯೇಯವನ್ನು ವಿವರಿಸಿದರು. ಈ ಸಭೆಯಲ್ಲಿ ಕೆಳಗಿನ 8 ಠರಾವುಗಳು ಅಂಗೀಕರಿಸಲ್ಪಟ್ಟವು.

(1) ಕಸ್ತೂರ್ ಬಾ ನಿಧಿಯ ಧ್ಯೇಯಕ್ಕನುಸಾರವಾಗಿ ಕೆಲಸಮಾಡುವ ಸಂಸ್ಥೆಗಳಿಗೆ ಧನಸಹಾಯ ಕೊಡುವದು. ಇಂಥಾ ಸಂಸ್ಥೆಗಳಿಗೆ ಸಹಾಯಕೊಡಲು ಜಿಲ್ಲಾ ಮತ್ತು ಪ್ರಾಂತೀಕ ಸಮಿತಿಗಳ ಶಿಫಾರಸ್ಸು ಇರತಕ್ಕದ್ದು.

(2) ಸಾಮಾನ್ಯವಾಗಿ ಪ್ರತಿ ಜಿಲ್ಲೆಯ ಕಾರ್ಯಯೋಜನೆಯು ಕೇಂದ್ರ ಸಮಿತಿಯಿಂದ ಧನಸಹಾಯ ಕೇಳುವಂತಿರಬಾರದು.

(3) ಕಸ್ತೂರ್ ಬಾ ನಿಧಿಯ ಆಶ್ರಯದಲ್ಲಿ ಕೆಲಸಮಾಡುವ ಗಂಡಸರು ಹೆಂಗಸರುಗಳಿಗೆ ಸರಿಸಮಾನವಾದ ಕೂಲಿಯೂ ವೇತನ ಕೊಡಲ್ಪಡಬೇಕು.

(4) ಕೆಲಸಗಾರರನ್ನು ತರಬೇತುಮಾಡಲು ರೂಪಿಸಲ್ಪಟ್ಟ ಪ್ರಕಟವಾಗಿರುವ ಕೇಂದ್ರಸಮಿತಿಯ ಯೋಜನೆಯನ್ನು ಸಾಧ್ಯವಾದಷ್ಟು ಬೇಗ ಜಾರಿಗೆತರುವದು. ತರಬೇತುಹೊಂದುವ ಗಂಡಸರಿಗೆ ಕಸ್ತೂರ್ ಬಾ ನಿಧಿಯಿಂದ ಖರ್ಚು ಕೊಡಲಿಕ್ಕೆ ಕೂಡದು.

(5) ಈ ನಿಧಿಗೆ ಸಂಬಂಧಿಸಿದ ಎಲ್ಲ ಕೆಲಸದ ಧ್ಯೇಯವು ಮಹಿಳೆಯರ ಪುರೋಭಿವೃದ್ಧಿಯ ದೃಷ್ಟಿಯಿಂದಾಗಬೇಕು.

(6) ಮಕ್ಕಳ ಶಿಕ್ಷಣ ಮತ್ತು ತಾಯಿಯರ ಆರೋಗ್ಯವು ಈ ನಿಧಿಯ ಕಾರ್ಯಕ್ರಮದ ಆರೋಗ್ಯಭಾಗದ ಒಂದು ಪ್ರಾಮುಖ್ಯ ವಿಚಾರವಾಗಿರಬೇಕು.

(7) ಈ ನಿಧಿಯ ಆಶ್ರಯದಲ್ಲಿ ನಡೆಯುವ ಕೆಲಸವು ಕಷ್ಟದಲ್ಲಿರುವವರಿಗೆ ಸಹಾಯಮಾಡುವದೇ ಅಲ್ಲ; ಕಷ್ಟದ ಕಾರಣವನ್ನು ಕಡಿಮೆಹಿಡಿದು ಅದನ್ನು ಸಮೂಲವಾಗಿ ನಾಶಮಾಡುವದು.

(8) ಕಟ್ಟಡ, ಜಾಗ, ಮೊದಲಾದು ವುಗಳನ್ನು ಕೊಂಡುಕೊಳ್ಳಲು ಸಾಮಾನ್ಯವಾಗಿ ಈ ನಿಧಿಯಿಂದ ಧನವ್ಯಯಮಾಡಬಾರದು.

ಮಹಾತ್ಮಗಾಂಧಿಯವರು 18 ನಿಮಿಷಗಳ ವರೆಗೆ ಮಾತಾಡಿದರು. ನಂತರ ಪ್ರಶ್ನೆಗಳನ್ನು ಆಹ್ವಾನಿಸಿ ಉತ್ತರವಿತ್ತರು. ಮಹಾತ್ಮರ ಆರೋಗ್ಯವು ಶಿಥಿಲವಾಗಿದ್ದು ಈ ದಿನಗಳಲ್ಲಿ ಬಹುಹೊತ್ತು ಮೌನವೃತ ಕೈಗೆಯುಕೊಳ್ಳುತ್ತಾರೆ.

### ಗಾಂಧೀಜಿಯವರ ಸಲಹೆ.

—೦೦—

ನಿಧಿಗೆ ಸಂಗ್ರಹವಾಗಿರುವ ಒಂದು ಕೋಟಿ 24 ಲಕ್ಷ ರೂಪಾಯಿಗಳ ವಿಷಯ ಮಾತಾಡುತ್ತಾ, 'ಶಿಫ್ಟ್ ಕಾರ್ಯಕ್ಕೆ ನಾನು ತುಂಬಾ ಕಾತುರನಾಗಿರುವದಾದರೂ ಈ ನಿಧಿಯ ಒಂದು ಪೈಯೂ ವ್ಯರ್ಥವಾಗಿ ಖರ್ಚಾಗಲು ಬಿಡಲಾರೆ. ಈ ನಿಧಿಯ ಒಬ್ಬ ನಿರೀಕ್ಷಿಯೂದ ಸರಳಹೃದಯದ ಹೆಂಗಸಿನ ಹೆಸರಿನಿಂದ ಸಂಗ್ರಹಿಸಲ್ಪಟ್ಟಿದೆ. ಆಕೆಯ ಹೆಸರಿನಲ್ಲಿ ನಡೆಸಲ್ಪಡುವ ಕೆಲಸವೂ ಕೂಡ ಸಧ್ಯಳವೂ, ಮೇಸರ ಹಿತವೂ ಆಗಿರಬೇಕ. ಕೆಲಸಗಾರರ ಸಂಖ್ಯೆಯ ಬಗ್ಗೆ ನನಗೆ ಹೆಚ್ಚು ನಿಗವಿಲ್ಲ. ಎರಡೇ ಎರಡು ಜನ ಯೋಗ್ಯವತ್ತು ನಂಬಿಗಸ್ಥ ಗಂಡಸರು ಯಾ ಹೆಂಗಸರು ದೊರೆತದ್ದಾದರೆ ಕೆಲಸ ಕೈಕೊಳ್ಳಲು ಹಿಂಜರಿಯಲಾರೆನು. ನನ್ನ ಮಟ್ಟಿಗೆ ಹೇಳುವದಾದರೆ ಸಾಧ್ಯವಾದಷ್ಟು ಈ ನಿಧಿಯ ಕಾರ್ಯ ಸಮಿತಿಯಿಂದ ಗಂಡಸರನ್ನು ವಿನಾಯಿಸಿ ಪ್ರಾಂತೀಕ ಸಮಿತಿಗಳಲ್ಲಿ ಹೆಂಗಸರನ್ನೇ ನೇಮಿಸಬೇಕು. ಆದರೆ ಅಂಥಾವರಿಗೆ ಹೆಚ್ಚಿಲ್ಲದಿದ್ದರೂ ಗಂಡಸರಷ್ಟೇ ಯೋಗ್ಯತೆಯಿರಬೇಕು.

ಈ ಒಂದುಕೋಟಿ 24 ಲಕ್ಷ ರೂಪಾಯಿಗಳು ಹಿಂದೂದೇಶದ ಲಕ್ಷಾಂತರ ಗ್ರಾಮಗಳಲ್ಲಿ ಹಂಚಲ್ಪಡುವದಾದರೆ ಸಮುದ್ರದಲ್ಲಿ ಒಂದು ಹನಿಬಿದ್ದಂತೆ. ಹಿಂದೂದೇಶವು ಯುದ್ಧಕ್ಕಾಗಿ ದಿನಕ್ಕೆ ಒಂದುಕೋಟಿಯಂತೆ ನೆಚ್ಚಣೆಮಾಡುತ್ತಿತ್ತು. ಆದರೆ ಹಿಂದೂದೇಶದ ಮಹಿಳೆಯರ ಮತ್ತು ಮಕ್ಕಳ ಹಿತಕ್ಕಾಗಿ ಸಂಗ್ರಹವಾದ ಈ 1 ಕೋಟಿ 24 ಲಕ್ಷ ರೂಪಾಯಿಗಳು ಎಲ್ಲರ ದೃಷ್ಟಿಯಲ್ಲಿ ದೊಡ್ಡದಾಗಿ ಕಾಣುತ್ತಿದೆ.

ಹಣವನ್ನು ಹೇಗೆ ವಿನಿಯೋಗಿಸಬೇಕೆಂಬುದರ ಬಗ್ಗೆ ವಿವರಿಸುತ್ತಾ ಈ ನಿಧಿಯನ್ನು ಮೂರು ಭಾಗಗಳಾಗಿ ಮಾಡಿದರು. ಒಂದನೆಯದು ಗ್ರಾಮಗಳಲ್ಲಿನ ಹೆಂಗಸರಿಗೆ ಮತ್ತು ಮಕ್ಕಳಿಗೆ ವೈದ್ಯಕೀಯ ಸಹಾಯ. ಈಗ ಬಂದ ಯೋಜನೆಗಳನ್ನು ನೋಡಿದರೆ ಎಲ್ಲರೂ ಹೆಂಗಸರಿಗೆ ಪ್ರಸೂತಿ ಗೃಹ ಮತ್ತು ಹೆಂಗಸು ಮಕ್ಕಳಿಗೆ ಆಸ್ಪತ್ರೆಗಳನ್ನು ಮಾಡುವ ದೃಷ್ಟಿಯಲ್ಲಿರುವದು ಕಂಡು ಬಂತು ಈ ವಿಚಾರದಲ್ಲಿ ಗಾಂಧೀಜಿಯವರು ಸ್ವಲ್ಪ ಅಸಮಾಧಾನ ವ್ಯಕ್ತಮಾಡಿದರು. ಯಾವ ರೀತಿಯ ವೈದ್ಯಕೀಯ ಸಹಾಯಗಳು ಮತ್ತು ಯಾವ ಮಾದರಿಯ ಔಷಧಿಗಳು ಎಂಬುದೂ ಒಂದು ಪ್ರಶ್ನೆಯು. ಇದು ಗಾಂಧೀಜಿಯವರ ಮನಸಿನಲ್ಲಿ ಹಿಂದಿನಿಂದಲೇ ಇದೆಯೆಂದೂ ಎಲ್ಲರೂ ಈ ಬಗ್ಗೆ ವಿಚಾರ ವಿನಿಮಯಮಾಡಬೇಕೆಂದೂ ಅವರು ಹೇಳಿದರು. 'ನನ್ನ ಅಭಿಪ್ರಾಯ ಹೇಳುವದಾದರೆ ಶಸ್ತ್ರಚಿಕಿತ್ಸೆ ಮತ್ತು ನೈರ್ಮಲ್ಯಕಾರ್ಯಗಳನ್ನೆ ಪ್ರಧಾನವಾಗಿಟ್ಟುಕೊಳ್ಳಬೇಕು. ಕೆಲವು ಕಠಿಣ ಮತ್ತು ಜಟಿಲಪ್ರಸಂಗಗಳಲ್ಲಿ ಕೆಲವನ್ನು ಬಿಟ್ಟರೂ ಚಿಂತೆಯಿಲ್ಲ. ಕೆಲವು ರೋಗಿಗಳು ಸಾಯಲೂಬಹುದು. ಆದರ ಬಗ್ಗೆ ಹೃದಯವನ್ನು ಕಲ್ಲುಗಿರಿಸಲು ರೂಢಿಸಬಹುದಾದರೂ ನಿರೋಗಿಯೂದ ಮನುಷ್ಯನು ಐಯಿಲೀಳುವದನ್ನು ನೋಡುವಾಗ ಹೃದಯವು ತುಂಡಾಗತ್ತದೆ. ಅವರವರ ಆರೋಗ್ಯದ ಬಗ್ಗೆ ಎಚ್ಚರಿಕೆ ತೆಗೆದುಕೊಳ್ಳುವಂತೆ ಗ್ರಾಮದ ಜನರಿಗೆ ಬೋಧಿಸಬೇಕು. ಬಡತನ ಮತ್ತು ಅನೈರ್ಮಲ್ಯತೆಯೇ ಇದಕ್ಕೆ ಕಾರಣ.

ಎರಡನೆಯ ವಿಚಾರವೆಂದರೆ ವಿದ್ಯೆಗೆ ಖರ್ಚು. ವಿದ್ಯೆಯು 'ನಯಿತಾಲಿಂ' ಪದ್ಧತಿಯಲ್ಲಾಗಬೇಕು. ಅನೇಕರ ಆರ್ಥಿಕ ಸ್ಥಿತಿಯನ್ನು ಪ್ರಾಥಮಿಕ ಗ್ರಾಮಕೈಗಾರಿಕೆಗಳಿಂದ ಅಭಿವೃದ್ಧಿಮಾಡಿಕೊಳ್ಳಬೇಕು. ಇಂದು ನಮ್ಮ ಹೆಂಗಸರ ಮುಖ್ಯಕರ್ತವ್ಯವೆಂದರೆ ಮಕ್ಕಳನ್ನು ಹೆರುವದು, ಗಂಡಸರ ಹಿತಸಾಧನೆ ಆಥವ ಗೃಹ ಕೆಲಸವೇ ಆಗಿದೆ. ಇದು ನಾಚಿಕೆಗೇಡಿನದು. ಹೆಂಗಸರನ್ನು ಮನೆಯ ಸಾಧನವಾಗಿ ಮಾಡಿದ್ದೂಂಡೇ ಕೆಲ್ಲ; ಹೋಗಿ ಹೋಗಿ ಅಕೆಯು ಗಂಡಸರಿಗಿಂತಾ ಶ್ರಮವಹಿಸಿ ಕೆಲಸಮಾಡಿದರೂ ಅಕೆಗೆ ಕಡಿಮೆ ಕೂಲಿ ಕೊಡಲ್ಪಡುತ್ತದೆ. ಈ ರೀತಿಯ ಅಸಮಾನತೆ ನಿಲ್ಲಬೇಕು. ಗ್ರಾಮದಲ್ಲಿ ವಯಸ್ಕರೂ ಕೂಡ ಬಹು ಚಿಕ್ಕ ವಯಸ್ಸಿನಿಂದಲೇ ಶ್ರಮಿಸತೊಡಗುತ್ತಾರೆ. ಈ ಬಗ್ಗೆ ಯೋಗ್ಯ ಯೋಜನೆಗಳು ಮುಂದೆ ಬಂದಿಲ್ಲ. ಗ್ರಾಮದ ಮಕ್ಕಳ ತಂದೆಗಳು ನಗರಗಳ ತಂದೆಗಳಂತೆ ಮಕ್ಕಳನ್ನು ಓದಲು ಕಳಿಸಿ ಹಣ ಖರ್ಚುಮಾಡಲಾರರು ಅವರ ವಿದ್ಯೆಯ ಗ್ರಾಮದ ಜನರ ಅಭಿವೃದ್ಧಿಗೆ ಸಹಕಾರಿಯಾಗಿ ಮುಂದೆ ಜೀವನನಡೆಸಲು ಸಹಾಯಕವಾಗಬೇಕು. ಈಗೆ ಏರ್ಪಟ್ಟಿರುವ ವಧ್ಯಾ ಯೋಜನೆಯು ಕಠಿಣವಿದೆ. ಇದನ್ನು ಜಾರಿಗೆ ತರುವವರು ಬಹು ನಿಷ್ಠೆಯವರಾಗಬೇಕು. ಇದಕ್ಕಾಗಿ ತರಬೇತುಗಳು ಸಹ ಇಷ್ಟ ಇರುವವರು ಕಡಿಮೆ. ಇಂಥಾ ಮನುಷ್ಯ

ರು ಕಸ್ತೂರ್ ಬಾ ಸ್ಮಾರಕ ನಿಧಿಯು ಸಮಿತಿಗೆ ಬರಕೂಡದು. ಅಂಥಾ ಜನರಿರುವದಾದರೆ ಅವರು ರಾಜೀನಾಮೆಕೊಟ್ಟು ಬೇರೆಯವರಿಗೆ ಸ್ಥಳ ತೆರವು ಮಾಡಬೇಕು.

ಅವರ ಭಾಷಣದ ಅಂತ್ಯದಲ್ಲಿ ಒಬ್ಬ ಸ್ನೇಹಿತರು ಗ್ರಾಮದ ಜನಸಂಖ್ಯೆ ಎಷ್ಟಿರಬೇಕಾಗುವದೆಂದು ಪ್ರಶ್ನೆ ಕೇಳಿದಕ್ಕೆ ಗಾಂಧಿಜಿಯವರು 2000 ಕ್ಕಿಂತಾ ಹೆಚ್ಚು ಇರಬಾರದೆಂದರು. ಹಿಂದೂದೇಶದಲ್ಲಿ ಬಹು ಸಂಖ್ಯೆಯು ಗ್ರಾಮಗಳಲ್ಲಿ 500 ರಿಂದ 1000 ದ ವರೆಗೆ ಮಾತ್ರ ಜನಸಂಖ್ಯೆ ಇರುವದೆಂದೂ ಕೆಲವು ಗ್ರಾಮಗಳು ನಗರಗಳಂತಿರುವವೆಂದೂ ಹೇಳಿದರು. ಸಿರಿವಂತರಿಂದ ಕೂಡಿದ ನಗರಗಳಂತಿರುವ ಗ್ರಾಮಗಳಲ್ಲಿ ಈ ನಿಧಿಯ ಹಣವನ್ನು ಖರ್ಚುಮಾಡಲಿಕ್ಕೆ ಕೂಡದೆಂದು ಅವರು ಹೇಳಿದರು.

### ಪ್ರಶ್ನೋತ್ತರಗಳು.

ಪ್ರ:–ಗ್ರಾಮಿಣ ಜನರ ಆರ್ಥಿಕ ಪುನರುದ್ಧಾರಕ್ಕೆ ಯಾವ ಮಾರ್ಗವನ್ನು ಸೂಚಿಸುವಿರಿ?

ಉ:–ನಿಜವಾದ ವಿಸ್ತೃತ ಗ್ರಾಮ ಪುನರ್ರಚನೆಯು ಅವರ ಆರ್ಥಿಕ ಉನ್ನತಿಗೆ ಕಾರಣವಾಗಿ ಪರಿಣಮಿಸದಿರದು. ಪ್ರಸೂತಿಸಹಾಯ ಒಂದು ಬಿಟ್ಟು ನಾನು ಸೂಚಿಸಿದ ಉಳಿದ ಎಲ್ಲವೂ ಹಳ್ಳಿಗರ ಆರ್ಥಿಕ ಅಭಿವೃದ್ಧಿಗೂ ಸಹಾಯಕವಾಗುತ್ತವೆ.

ಪ್ರ:–ನಿಮಗೆ ಒಂದು ಜಿಲ್ಲೆಯ ಜವಾಬ್ದಾರಿಯನ್ನು ಕೊಟ್ಟಿದ್ದರೆ ನೀವು ಹೇಗೆ ಕೆಲಸ ಪ್ರಾರಂಭಿಸುತ್ತಿದ್ದಿರಿ?

ಉ:–ಒಂದು ಜಿಲ್ಲೆಯು ನನಗೆ ದೊಡ್ಡ ಘಟಕವಾಯಿತು. ನಾನು ಜಯಪ್ರದವಾಗಿ ಒಂದೇ ಗ್ರಾಮದಲ್ಲಿ ಕಾರ್ಯ ಮಾಡಬಲ್ಲೆನಾದರೆ ನನಗೆ ತೃಪ್ತಿಯೆನಿಸುವದು. ಹಿಂದೂದೇಶದ 7 ಲಕ್ಷ ಗ್ರಾಮಗಳಿಗೆ ಅಸು ಮೂವರಿಯಾಗಿ ಅವೆಲ್ಲವೂ ಅದನ್ನು ಅನುಸರಿಸುಮುತ್ತಾಗುವದು. ಈವರೆಗೆ ಗ್ರಾಮ ಕೆಲಸವನ್ನು ನಾವು ಸಾಕಷ್ಟು ನಿಷ್ಠೆಯಿಂದ ಕೈಗೊಂಡಿಲ್ಲ. ಇನ್ನಾದರೂ ನಾವು ಮಾಡಬೇಕು.

ಪ್ರ:–ಕೆಲವು ಜನರು ವಿಧಾಯಕ ಕಾರ್ಯಕ್ರಮವನ್ನು ತಮ್ಮ ರಾಜಕೀಯ ಕೆಲಸದ ಅಂಗವಾಗಿ ಅನುಸರಿಸುತ್ತಾರೆ. ಫಲಿತಾಂಶವಾಗಿ ಅವರು ಎರಡನ್ನೂ ಸರಿಯಾಗಿ ಮಾಡಲಾರರು. ಇದನ್ನು ನಿಲ್ಲಿಸಲು ಯೋಗ್ಯ ಮೇಲ್ವಿಚಾರಣೆಬೇಕು.

ಉ:–ವಿಧಾಯಕ ಮತ್ತು ರಾಜಕೀಯ ಕಾರ್ಯಕ್ರಮಗಳೆನ್ನು ಒಟ್ಟಿನೊಂದಕ್ಕೆ ವಿಶ್ರಮಮಾಡಬೌರದೆಂಬ ದನ್ನು ನಾನು ಪೂರ್ಣ ಒಪ್ಪುತ್ತೇನೆ. ಯೋಗ್ಯ ರೀತಿಯಿಂದ ವಿಧಾಯಕ ಕಾರ್ಯಕ್ರಮ ಕೈಗೊಳ್ಳುವದೇ ನನಗೆ ಸಾಕು. ಮೇಲ್ವಿಚಾರಣೆ ಬಗ್ಗೆ ನಿನ್ನ ವೈದ್ಧಕಾರ್ಯದರ್ಶಿಯೂವ ಥಕ್ಕರ್ ಬಾಪ, ಯವತಿಕಾರ್ಯದರ್ಶಿಣಿಯೂವ ಮೃದುಲಾಬೆನ್ ಇವರು ಇದ್ದಾರೆ.

ಪ್ರ:–ಇಂದು ಪ್ರಾಂತೀಕ ಸಮಿತಿಗಳಲ್ಲಿ ಬಹು ಸಂಖ್ಯೆಯಿಂದ ಗಂಡಸರೇ ಇದ್ದಾರೆ. ಎಷ್ಟು ಸಮಯದಲ್ಲಿ ಇವರನ್ನು ಬದಲುಮಾಡಿ ಹೆಂಗಸರನ್ನು ನೇಮಿಸಲಿಚ್ಛಿಸುತ್ತೀರಿ?

ಉ:–ಹೆಂಗಸರು ಎಂಬ ಕಾರಣದಿಂದ ಹೆಂಗಸರನ್ನು ಸಮಿತಿಯಲ್ಲಿ ಸೇರಿಸಿಕೊಳ್ಳಲಾಗುವದಿಲ್ಲ ಅವರಿಗೆ ಸಾಕಷ್ಟು ಯೋಗ್ಯತೆ ಇದ್ದರೆ ಮಾತ್ರ ಸಾಧ್ಯ. ಈ

(3ನೇ ಪುಟ ನೋಡಿ)

# ಕೊಡಗು

**ತಾ. ೨೩-೨-೧೯೪೫ನೇ ಶುಕ್ರವಾರ**

## ಜಿಲ್ಲಾ ಬೋರ್ಡಿನ ಆದಾಯ ವೆಚ್ಚ.

ಕಳೆದ ತಾ. 9-2-45 ರಲ್ಲಿ ಜಿಲ್ಲಾ ಬೋರ್ಡಿನ ಬಜೆಟ್ ವಿಂಟಿಂಗು ನಡೆಯಿತು. 1945-46 ನೇ ಸಂವತ್ಸರದಲ್ಲಿ ಬೋರ್ಡಿನ ಖರ್ಚು ಒಂದು ಲಕ್ಷದ 85 ಸಾವಿರನೆಂದು ಅಂದಾಜು ಮಾಡಲಾಗಿದೆ. ಅಂದರೆ ಈ ವರ್ಷದ ಆದಾಯಕ್ಕಿಂತಾ ರೂ. 25 ಸಾವಿರ ಹೆಚ್ಚು ಖರ್ಚಾಗಬೇಕಿದೆ. ಈ ಹಣವನ್ನು ಬೋರ್ಡಿನ ಹಿಂದಳ ಉಳುವರಿಯಿಂದ ಭರ್ತಿ ಮಾಡುವ ದೃಷ್ಟಿಯಿಂದ ಬಜೆಟ್ಟನ್ನು ಸರಿಗಟ್ಟಲಾಗಿದೆ.

ಬೋರ್ಡಿನ ಆದಾಯವು ಅದರ ಖರ್ಚಿಗೆ ಸರಿಯಾಗಿ ಹೆಚ್ಚುತ್ತಿಲ್ಲ. ಬೋರ್ಡು ಮಾಡುತ್ತಿರುವ ಖರ್ಚಾದರೂ ಅನಿವಾರ್ಯವಾದ ಜನಹಿತಕಾರಕ ಖರ್ಚುಗಳು. ಕೊಡಗಿನ ಜನಹಿತಕಾರ್ಯಗಳ ಬಹುಭಾಗವು ಬೋರ್ಡಿನಿಂದಲೇ ನಿರ್ವಹಿಸಲ್ಪಡುತ್ತಿದೆ. ಆದರೆ ಯೋಚಿಸಿದಂತೆ ಜನತೆಯ ಸೇವೆಮಾಡಲು ಬೋರ್ಡಿಗೆ ಸಾಕಷ್ಟು ಧನಬಲವಿಲ್ಲ. ಯುದ್ಧೋತ್ತರ ಕಾಲದಲ್ಲಿ ಬೋರ್ಡಿನಿಂದ ಆಗಬೇಕಾದ ಮಹಾಕಾರ್ಯಗಳಿವೆ. ಕೊಡಗಿನ ವಿದ್ಯಾಭಿವೃದ್ಧಿಯ ಬಹುಭಾಗವು ಬೋರ್ಡಿಗೆ ಸಂಬಂಧಿಸಿದ್ದಿದೆ. ವೈದ್ಯಕೀಯ ವಿಚಾರದಲ್ಲೂ ಅದಕ್ಕೆ ಜವಾಬ್ದಾರಿಯಿದೆ. ಸಹಿವಾಟಿನ ವಿಚಾರದಲ್ಲಿ ಅಲ್ಲೊಂದಿಲ್ಲೊಂದು ಎಂದಿರುವ ಪ್ರಾಂತೀಕ ರಸ್ತೆಗಳನ್ನು ಬಿಟ್ಟು ಉಳಿದುದೆಲ್ಲವೂ ಬೋರ್ಡಿನ ಹತೋಟಯಲ್ಲಿದೆ. ಈ ದೊಡ್ಡ ಕಾರ್ಯಭಾರವನ್ನು ನಿರ್ವಹಿಸಲು ಹಣ ಬೇಕು. ಆದರೆ ಬೋರ್ಡು ಈ ವಿಚಾರದಲ್ಲಿ ತುಂಬಾ ಬಡವಾಗಿದೆ.

ತನ್ನ ಆಶ್ರಯದಲ್ಲಿರುವ ಅಧ್ಯಾಪಕರಿಗೆ ತುಟ್ಟಿಬತ್ಯ ಕೊಡಲು ಮನಸ್ಸಿದ್ದರೂ ಕೊಡಲಾರದೆ ಕಷ್ಟದಲ್ಲಿದ್ದಾಗ ಸರಕಾರವೆ ನೆರವಿಗೆ ಬಂದು ಸಹಾಯಮಾಡಿದುದು ಸ್ಮರ್ತವ್ಯ. ಹಾಗೆಯೇ ಬೋರ್ಡು ನಿರ್ವಹಿಸಬೇಕಿರುವ ಇತರ ಪ್ರಾಮುಖ್ಯ ಜವಾಬ್ದಾರಿ ಕಾರ್ಯಗಳಿಗೂ ಸರಕಾರವು ಧನಸಹಾಯಮಾಡುವದು ಕರ್ತವ್ಯ. ಬೋರ್ಡು ನೇಲುಸ್ತುವಾರಿ ನೋಡುತ್ತಿರುವ ರಸ್ತೆಗಳ ಸ್ಥಿತಿ ಚೆನ್ನಾಗಿಲ್ಲ. ಅದಕ್ಕೆ ಖರ್ಚುಮಾಡಲು ಬೋರ್ಡಿನಲ್ಲಿ ಸಾಕಷ್ಟು ಹಣವಿಲ್ಲ. ಆದ್ದರಿಂದ ವ್ಯಾಪಾರ ವಹಿವಾಟಿಗೆ ಪ್ರಾಮುಖ್ಯವಾಗಿ ಹಳ್ಳಿಯ ರೈತನಿಗೆ ತುಂಬಾ ಕಷ್ಟವಾಗಿದೆ. ಮೋಟಾರು, ಲಾರಿ ವಾಹನಗಳಿಂದ ಬರುವ ಉತ್ಪತ್ತಿಯನ್ನು ಸರಕಾರವೇ ತೆಗೆದುಕೊಳ್ಳುತ್ತಿದೆ. ಇದಕ್ಕೆ ಪ್ರತಿರೂಪವಾಗಿ ಕೇವಲರೂ 22000 ದೊಳಗೆ ವಂತಿಗೆ ಕೊಡುತ್ತಿದೆ. ಈ ಬಾಬಿನಿಂದ ಸರಕಾರಕ್ಕೆ ಒಂದು ಲಕ್ಷದ ಹತ್ತಿರ ಉತ್ಪತ್ತಿಯಿರುವಾಗ ಬೋರ್ಡಿಗೆ ಹೆಚ್ಚಿನ ವಂತಿಗೆ ಕೊಡಬೇಕಾದುದು ಕರ್ತವ್ಯ. ಮುಂದೆ ಬರುವ ವರ್ಷಗಳಲ್ಲಿ ಬೋರ್ಡು ಹೆಚ್ಚು ವಿಸ್ತೃತ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕು. ಅದಕ್ಕೆ ಬೇಕಾದ ಧನವನ್ನು ವದಗಿಸಿಕೊಳ್ಳಲು ಸರಕಾರವೂ ಸಹಾಯಕವಾಗಬೇಕು. ಎಕ್ಸೈಸ್ ಉತ್ಪತ್ತಿಯಿಂದ ಇಂಡಿಯಾ ಸರಕಾರಕ್ಕೆ ಕೊಡಗಿನಿಂದ ದೊರೆಯುವ ಲಕ್ಷಾಂತರ ರೂಪಾಯಿಗಳ ಉತ್ಪತ್ತಿಯಲ್ಲಿ ಒಂದು ಲಕ್ಷವನ್ನು ಜಿಲ್ಲಾ ಬೋರ್ಡಿಗೆ ವಂತಿಗೆ ರೂಪದಲ್ಲಿ ಕೊಡಿಸಲು ಸ್ಥಳೀಯ ಸರಕಾರವು ಪೂರ್ಣ ಪ್ರಯತ್ನಮಾಡಬೇಕು.

ಕೊಡಗಿನ ವಿದ್ಯಾಭ್ಯಾಸವು ಯೋಗ್ಯ ಅಧ್ಯಾಪಕರಿಲ್ಲದೆ ಹಿಂದಡಿಯಿಡುತ್ತಿದೆಯೆಂಬ ಕೂಗು ಹಬ್ಬಿದೆ. ಹೆಚ್ಚು ವೇತನಕೊಟ್ಟು ಯೋಗ್ಯ ಅಧ್ಯಾಪಕರನ್ನು ನೇಮಿಸುವ ಶಕ್ತಿ ಬೋರ್ಡಿಗೆ ಇಲ್ಲ. ಆದರೂ ಸಹ ತನ್ನ ಈ ದುರ್ದೆಶೆಯಲ್ಲೂ ಕೂಡ ಆರು ಜನ ಅಧ್ಯಾಪಕರನ್ನು ಸೆಕೆಂಡರಿ ಗ್ರೇಡಿಗೆ ಏರಿಸುವ ತೀರ್ಮಾನಮಾಡಿದ್ದು ಸ್ತುತ್ಯ. ಅಧ್ಯಾಪಕರಿಗೆ ಈ ರೀತಿಯ ಪ್ರೋತ್ಸಾಹಕೊಡುತ್ತಾ ಬಂದರೆ ಉಪಾಧ್ಯಾಯವೃತ್ತಿಯು ಇಂದಿನಂತೆ ಬೇರೆಲ್ಲೂ ಕೆಲಸ ದೊರೆಯದವರಿಗೆ ಇರುವ ವೃತ್ತಿಯಾಗಲಾರದು.

ಕೊಡಗು ಸರಕಾರಕ್ಕೆ ಇಂದು ದುಡ್ಡಿನ ಅಡಚಣೆಯಿಲ್ಲ. ಇಂಥಾ ಸಂದರ್ಭದಲ್ಲಿ ವಿಶಾಲರೀತಿಯಲ್ಲಿ ಜನಹಿತ ಕೆಲಸ ಮಾಡುವ ಬೋರ್ಡಿಗೆ ಸಹಾಯನೀಡಿ ಜನತೆಯ ಮೇಲ್ಮೆಯನ್ನು ಕೋರುವದು ಸರಕಾರದ ಆವ್ಯಕರ್ತವ್ಯ.

## ದಂತವೈದ್ಯರು.

ಜನತೆಯು ನಾನಾ ರೀತಿಯ ರೋಗಗಳಿಗೆ ಒಳಗಾಗುವಂತೆಯೇ ಹಲ್ಲು ನೋವಿಗೂ ಒಳಗಾಗುವದು ಸ್ವಾಭಾವಿಕ. ಈಗೀಗ ಹಲ್ಲು ನೋವಿನಿಂದ ನರಳುವವರ ಸಂಖ್ಯೆ ಹೆಚ್ಚಾಗತೊಡಗಿದೆ. ಆದರೆ ಅದಕ್ಕೆ ತಕ್ಕ ಚಿಕಿತ್ಸೆಯನ್ನು ಮಾಡಿಸಲು ಸಾರ್ವಜನಿಕವಾದ ವ್ಯವಸ್ಥೆಯಿಲ್ಲದಿರುವದು ವ್ಯಸನಕರ. ಈಗಿನ ಸಿವಿಲ್ ಆಸ್ಪತ್ರೆಗಳಲ್ಲಿ ಹಲ್ಲನ್ನು ಕೀಳುತ್ತಾರೆ ನಿಜ. ಆದರೆ ಅದು ಆ ವಿದ್ಯೆಯಲ್ಲಿ ತರಬೇತಾದವರಿಂದ ಶಾಸ್ತ್ರೀಯ ರೀತಿ ನಡೆಯದ ಕಾರಣ ಬಹುಮತ ಜನರು ಹೆದರಿ ತಮ್ಮ ದಂತದ ಕಾಯಿಲೆ ಚಿಕಿತ್ಸೆಗೆ ಖಾಸಗಿ ಡಾಕ್ಟರುಗಳಲ್ಲಿಗೆ ಹೋಗುತ್ತಾರೆ. ಆದುದರಿಂದ ಸಾರ್ವಜನಿಕ ಹಿತ ದೃಷ್ಟಿಯಿಂದ ಪ್ರಥಮವಾಗಿ ಮಡಿಕೇರಿ ಮತ್ತು ವೀರಾಜಪೇಟೆ ಸಿವಿಲ್ ಆಸ್ಪತ್ರೆಗಳಲ್ಲಿ ಒಬ್ಬೊಬ್ಬರಂತೆ ದಂತ ವೈದ್ಯರನ್ನು ನೇಮಿಸಬೇಕೆಂದು ನಮ್ಮ ಆಗ್ರಹದ ವಿನಂತಿ. ಒಂದೇ ಬಾರಿ ಇಬ್ಬರನ್ನು ನೇಮಿಸುವದು ಕಷ್ಟವಾದರೆ ಪ್ರಥಮವಾಗಿ ಮಡಿಕೇರಿಯಲ್ಲಾದರೂ ನೇಮಿಸಬೇಕೆಂದು ನಮ್ಮ ಸದಾಶಯ.

## ವರ್ತಮಾನ.

ಹಿಂದೀ ಪ್ರಚಾರ ಮಂಡಳಿಯ ಸ. ಹಾಯಾರ್ಥವಾಗಿ ತಾ. 11-2-43 ರಲ್ಲಿ ವೀರಾಜಪೇಟೆ ಮುನ್ಸಿಪಲ್ ಹಾಲ್‌ನಲ್ಲಿ ಹಿಂದೀನಾಟಕವೊಂದು ಅಭಿನಯಿಸಲ್ಪಟ್ಟಿತು.

ವೀರಾಜಪೇಟೆ ಮುನ್ಸಿಪಲ್ ಹಿಂದೂಸ್ಥಾನಿ ಶಾಲಾ ಮುಖ್ಯೋಪಧ್ಯಾಯರಾಗಿದ್ದ ಶ್ರೀ. ಎಂ. ಅಹಮದ್‌ಸಾಹೇಬರು ತಾ. 6-2-45 ರಲ್ಲಿ ಶಿವಾಧೀನರಾದರು.

ಕೊಡಗಿನ ಆದಾಯಕ್ಕಂದಾಯ ಅಧೀಸದಾಗಿ ಶ್ರೀ. ಟಿ. ವೆಂಕಟೇಶ್ವರರಾವ್ ಇವರನ್ನು ಇಂಡಿಯಾಸರಕಾರದವರು ನೇಮಿಸಿರುವರೆಂದು ತಿಳಿಯಬರುತ್ತದೆ.

ಕೊಡಗಿನಲ್ಲಿ ಒಂದು ಕಾಫಿ ವ್ಯವಸಾಯ ಸರೀಕ್ಷಾಕೇಂದ್ರವನ್ನು ಕಾಫಿಮೂರ್ಕೆಟಿಂಗ್ ಬೋರ್ಡಿನವರು ತೆರೆಯಲಿರುವರೆಂದು ತಿಳಿಯಬಂದಿದೆ.

ಕಿಗ್ಗಟ್ಟುನಾಡು ಹೈಸ್ಕೂಲನ್ನು ನಡೆಸಲು ಅನುವಾಗುವಂತೆ ಹಂಗಾಮಿ ಕಟ್ಟಡ ಒಂದನ್ನು ಕಟ್ಟುವ ಏರ್ಪಾಡುಮಾಡಿ ತಾ. 27-2-45 ರಲ್ಲಿ ಅದರ ಅಸ್ತಿಭಾರ ಹಾಕಲು ನಿಶ್ಚಯವಾಗಿದೆ. ಹೈಸ್ಕೂಲಿನ ಖಾಯಂ ಕಟ್ಟಡಕ್ಕೆ ಬೇಕಾದ ಸಾಹಿತ್ಯಗಳ ಸಂಗ್ರಹವು ನಡೆದಿದೆ. ವಸೂಲಾತಿಯೂ ತೃಪ್ತಿಕರವಾಗಿ ನಡೆಯುತ್ತಿದೆಯೆಂದು ತಿಳಿಯಬರುತ್ತದೆ.

ವೀರಾಜಪೇಟೆಯಲ್ಲಿ ಹಿಂದೀ ಪರೀಕ್ಷೆಯು 18-2-45 ರಲ್ಲಿ ಇಲ್ಲಿಯ ಹೈಸ್ಕೂಲ್ ಹಾಲ್‌ನಲ್ಲಿ ಇಲ್ಲಿಯ ಮುಖ್ಯೋಪಧ್ಯಾಯರಾದ ಶ್ರೀ. ಆರ್. ಎಚ್. ಶೆಣೈಯವರ ನೇತೃತ್ವದಲ್ಲಿ ನಡೆಯಿತು. 19 ವಿದ್ಯಾರ್ಥಿಗಳು ಪರೀಕ್ಷೆಗೆ ಕೂತಿದ್ದರು.

ವೀರಾಜಪೇಟೆ ಕ್ರೈಸ್ತರ ಗುರುಗಳಾದ ರೆ. ಫಾದರ್. ಐ. ಬಿ. ಪಿಂಟೋರವರು ಬೆಂಗಳೂರಿಗೆ ವರ್ಗವಾದ ಕಾರಣ ಅವರನ್ನು ಬೀಳ್ಕೊಡುವ ಸಮಾರಂಭವು ತಾ. 18-2-45 ರಲ್ಲಿ ನಡೆಯಿತು. ಅವರ ಬದಲು ಗುರುಗಳಾಗಿ ರೆ. ಫಾ. ಜೆ. ಎಂ. ಡಿಸೋಜರವರು ಬಂದಿರುವರು.

ಕಸ್ತೂರಿ ಬಾ ಪುಣ್ಯತಿಥಿಯ ಸಂಬಂಧ ತಾ. 14-2-45 ರಲ್ಲಿ ಪೊನ್ನಂಪೇಟೆಯಲ್ಲಿ ಒಂದು ಸಾರ್ವಜನಿಕ ಸಭೆಯು ಡಾ. ಪಿ ಎಂ. ನಾಣಮ್ಮಯ್ಯನವರ ಅಧ್ಯಕ್ಷತೆಯಲ್ಲಿ ನಡೆದು ಮೃತರ ಆದರ್ಶ ಜೀವನ ವೈಶಿಷ್ಟ್ಯವನ್ನು ಕೊಂಡಾಡಲಾಯಿತು.

ಕೊಡಗು ಎಜ್ಲೆಟಿಕ್ ಎಸೋಸಿಯೇಶನಿನ ಆಶ್ರಯದಲ್ಲಿ ನಡೆದ ನೆರೆವಂಡ ಅಪ್ಪಚ್ಚು ಸ್ಮಾರಕ ಹಾಕಿಕಪ್ಪಿನ ಸಂದ್ಯಾಟದ ಕಡೇ ಆಟವು ಮಡಿಕೇರಿ ಹೈಸ್ಕೂಲ್ 'ಎ' ಟೀಮಿನವರಿಗೂ ಮಡಿಕೇರಿ ವಾಂಡರರ್ಸ್ ಟೀಮಿನವರಿಗೂ ನಡೆದು ಹೈಸ್ಕೂಲ್ ಟೀಮಿನವರು ಜಯಶೀಲರಾಗಿ ಕಪ್ಪನ್ನು ಗೆದ್ದರು.

ಕೈಕೇರಿ, ಅತ್ತೂರು, ಹೊಸೂರು ಗ್ರಾಮಗಳನ್ನೊಳಗೊಂಡು ಒಂದು ನೂತನ ಗ್ರಾಮವನ್ನು ರಚಿಸುವ ದೃಷ್ಟಿಯಿಂದ ಅಮ್ಮತ್ತಿಯ ಕಾರ್ಕಾಡು ಹೊಳೆಯ ಬಳಿ ಸಾರ್ವಜನಿಕ ಸಭೆಯೊಂದನ್ನು ತಾರೀಕು 10-3-45 ನೇ ಶನಿವಾರ ಬೆಳಗ್ಗೆ 10 ಗಂಟೆಗೆ ನಡೆಯುವದು.

ಕೊಡಗಿನ ಸಿವಿಲ್ ಸರ್ಜನರಾಗಿದ್ದ ಮಿ. ಟ್ರೇನರ್‌ರವರು ತಮ್ಮ ಕೆಲಸದ ಚಾರ್ಜನ್ನು ಆ. ಸರ್ಜನರಾದ ಶ್ರೀ ಸಿ. ಬಿ. ಮೇದಪ್ಪನವರಿಗೆ ಕೊಟ್ಟು ಹೋಗಿರುವರುವರೆಂದೂ, ಇಂಡಿಯಾ ಸರಕಾರದಿಂದ ಬೇರೆ ಐ. ಎಂ. ಎಸ್. ಅಧಿಕಾರಿಗಳನ್ನು ನೇಮಿಸುವ ಸಾಧ್ಯತೆ ತತ್ಕಾಲ ಇಲ್ಲದ ಕಾರಣ ಕೊಡಗಿನವರೊಬ್ಬರನ್ನೇ ಸಿವಿಲ್ ಸರ್ಜನರಾಗಿ ನೇಮಿಸಲಿರುವೆರೆಂದೂ ತಿಳಿಯಬಂದಿದೆ.

1944 ರ ಕಾಮನ್ ಎಂಟ್ರೆನ್ಸ್ ಪರೀಕ್ಷೆಯಲ್ಲಿ ಸಾಸಾಡವರ ಪೈಕಿ ಶ್ರೀಮತಿ ಮಣವಟ್ಟಿರ ಅಕ್ಕಮ್ಮ, ಕೊಂಡಿರ ಪೂಣಚ್ಚ, ಬಿದ್ವಾಟಂಡ ಪೊನ್ನಮ್ಮ, ಮಂಕ್ಕಡಿರ ಚಂಗಪ್ಪ, ಮಲ್ಲೇಂಗಡ ದೇವಯ್ಯ, ಕಂಡಂಡ ಅಪ್ಪಯ್ಯ, ಮನೆಯಪಂಡ ಪೊನ್ನಮ್ಮ, ಪುಲಿಯಂಡ ಸುಬ್ಬಯ್ಯ, ಕಂಡ್ರತಂಡ ಮಾದಪ್ಪ, ಅಜ್ಜಿಕುಟ್ಟಿರ ಐಯ್ಯಪ್ಪ, ಮತ್ತು ಕಲಿಯಂಡ ಸುಬ್ಬಪ್ಪ ಇವರುಗಳಿಗೆ ವರ್ಷಕ್ಕೆ ರೂ. 20-ಮೌಲ್ಯದ ಒಂದು ವರ್ಷದ ಅವಧಿಯ ವಿದ್ಯಾರ್ಥಿವೇತನವನ್ನು ಕೊಡಗು ವಿದ್ಯಾನಿಧಿಯಿಂದ ಕೊಡಲಾಗಿದೆ.

ಅಮ್ಮತ್ತಿನಾಡು ಕಾವಾಡಿ ಗ್ರಾಮದ ಶ್ರೀ ಸೋಮೆಯಂಡ ಅಪ್ಪಣ್ಣನವರು ತಾ. 7-2-45ರಲ್ಲಿ ತಮ್ಮ 80 ವಯಸ್ಸಿನಲ್ಲೂ, ಮಡಿಕೇರಿಯಲ್ಲಿರುವ ಶ್ರೀ ಮೂಡೆರ ತಿಮ್ಮಯ್ಯನವರ ಪತ್ನಿಯವರು ತಾರೀಕು 18-2-45ರಲ್ಲಿ ಮೈಸೂರು ಆಸ್ಪತ್ರೆಯಲ್ಲೂ ಶಿವಾಧೀನರಾದರೆಂದು ತಿಳಿಯುತ್ತೇವೆ.

## ಸಂಪಾದಕರಿಗೆ ಪತ್ರಗಳು.

ಕಾಮನ್ ಎಂಟ್ರೆನ್ಸ್ ಪರೀಕ್ಷೆಯ ಸಲುವಾಗಿ ಪ್ರತಿ ಪಾಠದಲ್ಲಿಯೂ ಮಾಡಿಲ್ ಪ್ರಶ್ನೆ ತಯಾರಾಗಿರುವುದರಿಂದ ವಿದ್ಯಾರ್ಥಿಗಳಿಗೂ, ಅಧ್ಯಾಪಕರಿಗೂ ಬಹು ಪ್ರಯೋಜನವುಂಟಾಗಿದೆಯೆಂದೂ, ಹಾಗೆ ಪ್ರೈವೇಟು ಪರೀಕ್ಷೆಗೂ ಈ ಏರ್ಪಾಡು ಮಾಡಿದರೆ ಉತ್ತಮವೆಂದೂ ಸ್ಥಂಭಪಟ್ಟ ಅಧಿಕಾರಿಗಳಲ್ಲಿ ವಿಚಾರಿಸಿದಾಗ ಒಬ್ಬರ ಅರಿಕೆ ಇದೆ.

ಮಡಿಕೇರಿ ಹೈಸ್ಕೂಲಿನಲ್ಲಿ ನಾಲ್ಕನೇ ಫಾರಂವಿನಲ್ಲಿ ಪಾಠ ಸರಿಯಾಗಿ ನಡೆಯುತ್ತಿಲ್ಲವೆಂದೂ, ಆದರಲ್ಲೂ 'ಬಿ' ಸೆಕ್ಷನಿಗೆ ಬಹು ತೊಂದರೆಯಾಗಿದೆಯೆಂದೂ ಬೇರೊಬ್ಬ ಅಧ್ಯಾಪಕರು ದೊರೆಯುವ ಮೊದಲೇ ಇದ್ದ ಅಧ್ಯಾಪಕರ ರಾಜಿನಾಮೆಯನ್ನು ಸ್ವೀಕರಿಸಿದ್ದರಿಂದ ಉಪಾಧ್ಯಾಯರಿಲ್ಲದೆ ಬೇರೆ ಸೆಕ್ಷನಾಗಳಲ್ಲಿ ಮೂವತ್ತು, ನಲವತ್ತು ಪಾಠಗಳಾದರೂ 'ಬಿ' ಸೆಕ್ಷನಿನ ಮಕ್ಕಳು ಮಂಡೆ ಬಿದ್ದು ತೊಂದರೆಗೆ ಆಸ್ಪದವಾಗಿದೆಯೆಂದೂ ಇನ್ನಾದರೂ ಈ ತೊಂದರೆಯನ್ನು ಪರಿಹರಿಸಬೇಕೆಂದೂ ವಿದ್ಯಾಭಿಮಾನಿಯೊಬ್ಬರ ಕೋರಿಕೆ.

## ಕೊಡಗು ಜಿಲ್ಲಾ ಬೋರ್ಡು ವಿಂಟಿಂಗು.

ತಾ. 9-2-45ರಲ್ಲು ನಡೆದ ಜಿಲ್ಲಾ ಬೋರ್ಡು ವಿಂಟಿಂಗಿನಲ್ಲಿ ಆದ ಪ್ರಾಮುಖ್ಯ ತೀರ್ಮಾನಗಳನ್ನು ಇಲ್ಲಿ ಕೊಡಲಾಗಿದೆ.

ಕೊಡಗು ಜಿಲ್ಲಾ ಬೋರ್ಡಿನ ಸರ್ವಿಸಿನಲ್ಲಿದ್ದು ನಿವೃತ್ತರಾಗಿರುವವರಿಗೆ ತುಟ್ಟಿ ಬತ್ಯ ಕೊಡಬೇಕೆಂಬ ಚೀಫ್ ಕಮಿಶನರ ಪತ್ರ ಓದಿ ತುಟ್ಟಿ ಬತ್ಯ ಕೊಡಲು ಅನುವಾಗುವಂತೆ ಸಾಕಷ್ಟು ಧನ ಸಹಾಯವನ್ನು ಸರಕಾರವು ಮಾಡಬೇಕೆಂದು ಕೇಳಿಕೊಳ್ಳಲು ತೀರ್ಮಾನವಾಯಿತು.

ನಾಪೋಕ್ಲು ನಾಡಿನ ಬಾಡಗ ಮೆಕ್ಕ ಸುಂಟಿಕೊಪ್ಪ ಕಾಂಡನಕೊಲ್ಲಿ ಗ್ರಾಮಗಳಲ್ಲಿ ಗ್ರಾಂಟ್-ಇನ್-ಎಯಿಡ್ ಶಾಲೆಗಳನ್ನು ತೆರೆದು ತಾ. 1-4-45ರಿಂದ ಮಾಸಿಕ ರೂ. 10ರಂತೆ ಪಂತಿಗೆ ಕೊಡಲು ತೀರ್ಮಾನವಾಯಿತು.

ಹೆಬ್ಬಲೆಯಲ್ಲಿ ಒಂದು ಹೊಸ ಶಾಲಾ ಕಟ್ಟಡ ಕಟ್ಟಲು ತೀರ್ಮಾನವಾಯಿತು. ಕೆದಮುಳ್ಳೂರು ಶಾಲೆಗೆ ಕೊಡುವ ಪಂತಿಗೆಯನ್ನು ಮಾಸಿಕ ರೂ. 5ರಂತೆ ಹೆಚ್ಚಿಸಲಾಯಿತು.

ಕಾಫಿ ಟೀ, ಆಡಿಕೆ, ಮೊಪಲಾದುವುಗಳ ಮೇಲಿನ ಕಂದಾಯದಿಂದ ಬರುವ ಉತ್ಪತ್ತಿಯಲ್ಲಿ ಒಂದು ಲಕ್ಷ ರೂಪಾಯಿಗಳನ್ನು ಜಿಲ್ಲಾ ಬೋರ್ಡಿಗೆ ಕೊಡಬೇಕೆಂದು ಸ್ಥಳೀಯ ಸರಕಾರದ ಮೂಲಕ ಕೇಂದ್ರ ಸರಕಾರವನ್ನು ಕೇಳಿಕೊಳ್ಳಲು ತೀರ್ಮಾನವಾಯಿತು.

ಬೋರ್ಡಿನ ವಿಪರೀತವಾಗಿ ಏರುತ್ತಿರುವ ಖರ್ಚನ್ನು ಸರಿಗಟ್ಟಲು ವಿದ್ಯಾಸೆಸ್ ಹಾಕುವ ಸೂಚನೆಯನ್ನು ಒಪ್ಪಲಿಲ್ಲ.

ಮುಕ್ಕೋಡ್ಲು ಶಾಲೆಗೆ ತಾರೀಕ್ಕು 1-4-45ರಿಂದ ತಿಂಗಳಿಗೆ ರೂ. 10ರಂತೆ ಗ್ರಾಂಟು ಕೊಡಲು ಮತ್ತು ಏವತ್ತೊಕ್ಲು ಶಾಲೆಗೆ ಕೊಡುತ್ತಿರುವ ಗ್ರಾಂಟನ್ನು ನಿಲ್ಲಿಸಲು ತೀರ್ಮಾನವಾಯಿತು.

ವಿದ್ಯಾ ಇಲಾಖೆಯಲ್ಲಿಯ ಅನೇಕ ಉಪಾಧ್ಯಾಯರು ಇಲ್ಲಿ ಕೊಡುವ ವೇತನವು ಹೆಚ್ಚು ಆಕರ್ಷಣೀಯವಾಗಿಲ್ಲವೆಂದು ಬೇರೆಡೆಗೆ ಹೋಗುವ ಕಾರಣ ಮತ್ತು ಹೆಚ್ಚು ಯೋಗ್ಯತೆ ಇರುವ ಅಧ್ಯಾಪಕರು ಕಮ್ಮಿ ಸಂಬಳವಲ್ಲಿ ದೊರೆಯದ ಕಾರಣ ಹೆಚ್ಚಿನ ಆರು ಸೆಕೆಂಡರಿ ಗ್ರೇಡುಗಳನ್ನು ನಿರ್ಮಿಸು ತೀರ್ಮಾನವಾಯಿತು.

---

### ಕಸ್ತೂರ್ಬಾರ ನಿಧಿ ಬೇಗೆ ವಿನಿಯೋಗಿಸಬೇಕು?

(1ನೇ ಪುಟದಿಂದ ಸಾಗಿದ್ದು.)

ಗಳನ್ನು ಮಲ್ಲಿರುವ ಹಣವು ಬೆಚ್ಚನಾಗುವದರೊಳಗೆ ಹೆಂಗಸರು ತಮ್ಮ ಜವಾಬ್ದಾರಿಯನ್ನು ತಾವೇ ನಿರ್ವಹಿಸಿಕೊಳ್ಳಲು ಶಕ್ತರಾದಾರೆಂದು ಆಶಿಸುತ್ತೇನೆ.

ಪ್ರ:–ಯೋಗ್ಯ ಮಹಿಳಾಕಾರ್ಯಕರ್ತರು ಜೊರಿಯದಿದ್ದರೆ ಈ ನಿಧಿಯನ್ನು ಮಹಿಳೆಯರ ತರಬೇತಿಗಾಗಿ ಯಾಕೆ ಉಪಯೋಗಿಸಬಾರದು?

ಉ:–ಇದೇ ನಮ್ಮ ಧ್ಯೇಯ. ಇದಕ್ಕಾಗಿಯೇ ನೀವೆಲ್ಲರೂ ಇಲ್ಲಿಗೆ ಬಂದಿರುವಿರಿ. ಯಾರ ಹೆಸರಿನಿಂದ ಈ ನಿಧಿಯು ಸಂಗ್ರಹವಾಯಿತೋ ಅಕೆಯ ಹೆಸರಿಗೆ ತಕ್ಕಂತೆ ಈ ನಿಧಿಯು ಖರ್ಚುಮಾಡಲ್ಪಡಬೇಕು.

ಪ್ರ:–ಹೊರಗೆ ಹೆಂಗಸರು ಹೊರಟರೆ ಅಪಾಯಬರುವಂಥಾ ಸಿಂಧ್ ಪ್ರಾಂತ ಮೊದಲಾದ ಕಡೆ ಗ್ರಾಮ ಕೆಲಸ ಹೇಗೆ ಮಾಡುವಿರಿ?

ಉ:–ಹೆಂಗಸರು ಪಂಡೆ ಬರದಿದ್ದರೆ ಗಂಡಸರು ಜವಾಬ್ದಾರಿವಹಿಸಬೇಕು. ಸಿಂಧ್‌ನಲ್ಲಿ ಮುಸ್ಲಿಂ ಹೆಂಗಸರು ಹೆದರಲು ಯಾವ ಕಾರಣವೂ ಇಲ್ಲ. ದೃಢನಿಶ್ಚಯವಿರುವ, ಸಾಯಲು ಹೆದರದಿರುವ ಯಾವ ಹೆಂಗಸನ್ನೂ ಯಾರೂ ಮಾನಭಂಗಪಡಿಸಲಾರರು. ಹೆಂಗಸರು ತಮ್ಮ ಹೆಂಡತನವನ್ನು ಬಿಟ್ಟು ಅಪಾಯಕ್ಕೆ ಹೆದರದೆ ಮುಂದೆ ಬರುವಂತೆ ಮಾಡುವದು ಈ ನಿಧಿಯ ಯೋಜನೆಯ ದೃಷ್ಟಿಯಲ್ಲಿದೆ.

ಪ್ರ:–ನಿಧಿಯನ್ನು ಸಂಗ್ರಹಮಾಡಲು ತೊಂದರೆತೆಗೆದುಕೊಂಡವರು, ಹೆಚ್ಚು ಹಣ ಕೊಟ್ಟವರು ಸಮಿತಿಯಲ್ಲಿರಲಿಚ್ಛಿಸುತ್ತಾರೆ. ಅಂಥವರು ಇರಬಹುದೇ?

ಉ:–ಹೆಚ್ಚು ಹಣಕೊಟ್ಟದ್ದು, ಯಾ ನಿಧಿ ಸಂಗ್ರಹಕ್ಕೆ ಶ್ರಮಿಸಿದುದು ಸದಸ್ಯನಾಗಲು ಒಬ್ಬನಿಗೆ ಯೋಗ್ಯತೆಯನ್ನು ತರಲಾರವು. ಸಮಿತಿಯು ದೊಡ್ಡದಿರಬಾರದು. ಬೇರೆ ಕೆಲಸವಿರುವವರು ಸಮಿತಿಯಲ್ಲಿರಬಾರದು.

---

## FOR SALE.

600 batties of wetland, 60 acres of dryland including a large area of scattered orange plantation (old), Banana area and about 6 acres of newly opened coffee is for sale. The property is situated in Sidapur town and enjoys all facilities including water for the paddy feilds all the year round. The sale also includes cattle, over 50,000 newly burnt bricks, a quantity of sawed timber, tenants' quarters, a zinc thatched cattleshed, a cleared Bungalow site etc. Owners intend to settle outside. Ceilng price Rs. 20,000/–. Negotiations open till 15th March only.

*Apply to:–*

*Pilot officer* D. M. APPACHOO,
C/o. Sri. **D. K. Appaya,**
Ammatti, S Coorg.

---

## ವಾರ್ತೆಗಳು.

ಅಮೇರಿಕದಲ್ಲಿ ಹೊಸದೊಂದು ತರದ ಸಿಗರೇಟು ತಯಾರಿಸಿರುವರು. ಇದರ ತುಟಿಯನ್ನು ಯಾವುದಕ್ಕಾದರೂ ಒರಸಿದೊಡನೆ ಅದು ತನ್ನಷ್ಟಕ್ಕೆ ಉರಿದುಹೊತ್ತಿಕೊಳ್ಳುತ್ತದೆ.

ಐದು ಸಾವಿರ ವರ್ಷಗಳ ಹಿಂದೆ ಅಖಿಲ ಚೀನದ ಮೊದಲ ಚಕ್ರವರ್ತಿಯ ರಾಣಿಯೂದ 'ಟ್ಸಾಸೂ' ಎಂಬವಳು ರೇಶ್ಮೆ ಸಿಲ್ಕುಗಳ ತಯಾರಿಕೆಯನ್ನು ಕಂಡುಹಿಡಿದಳು.

ಬಲ್ಗೇರಿಯಾದ ಸರಕಾರಿ ಹುದ್ದೆದಾರರಿಗೆ ದೊರಕುತ್ತಿರುವ ಮಾಸಿಕ ತಲಬುಗಳು ಈ ರೀತಿ ಇವೆ. ಪ್ರಧಾನ ಮಂತ್ರಿ ರೂ. 600, ವಿಶ್ವವಿದ್ಯಾಲಯದ ಮುಖ್ಯಾಧಿಕಾರಿಗಳಿಗೆ ರೂ. 255, ಪ್ರೊಫೆಸರರಿಗೆ 250; ನ್ಯಾಯಾಧೀಶರಿಗೆ ರೂ. 90 ರಿಂದ 150ರ ವರೆಗೆ; ಸೇನಾನಿಗಳಿಗೆ ರೂ. 225, ಪೊಲೀಸ್ ರೂ. 40; ಧರ್ಮಗುರುಗಳು ಬಿಶೋಪರು ರೂ. 300; ಉಪಾಧ್ಯಾಯರಿಗೆ ರೂ. 105. ಅಲ್ಲಿ ಫಕ್ಕೀರ್ಸ್ ಕ್ರೌನುವಿಲ್ಲ; ಲಂಚದ ಸುಳಿವಿಲ್ಲ. ನಮ್ಮಲ್ಲಿ?

1942 ರಲ್ಲಿ ಡಾ. ರಾಜೇಂದ್ರರನ್ನು ಬಂಧಿಸಿದ ಬಳಿಕ ಪ್ರಾಂತಿಕ ಕಾಂಗ್ರೆಸ್ ಕಚೇರಿಯಲ್ಲಿದ್ದ ಡಾ. ರಾಜೇಂದ್ರಪ್ರಸಾದರ ಮಹತ್ವದ ಅನೇಕ ಪತ್ರಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದು ಬೀಗಹಾಕಿ ಸದಾಕತ ಆಶ್ರಮದಲ್ಲಿಟ್ಟದ್ದು ಈಗ ಗೆದ್ದಲುಗಳ ಹೊಟ್ಟೆಯಲ್ಲಿ ಜೀರ್ಣವಾಗಿವೆ ಎಂದು ತಿಳಿಯುತ್ತದೆ. ಇತ್ತೀಚೆಗೆ ಬಿಡುಗಡೆಹೊಂದಿದ ರಾಜೇಂದ್ರಬಾಬುಗಳ ಕಾರ್ಯದರ್ಶಿ ಚಕ್ರಧರ ಶರಣರಿಗೆ ಅವುಗಳನ್ನು ಸರಿಯಾಗಿಡಲು ಸರಕಾರವು ಅವಕಾಶಕೊಟ್ಟಿತು. ಆದರೆ ಮಹತ್ವದ ಕಾಗದ ಪತ್ರಗಳೆಲ್ಲ ಹುಳತಿಂದು ಹೋಗಿದ್ದು ಅವನ್ನು ಸರಿಪಡಿಸಲು ಶಕ್ಯವಿಲ್ಲೆಂದು ಅವರು ತಿಳಿಸಿರುವರು.

—೦೦—


# SCIENTIFIC ROASTING

ROAST YOUR DAILY COFFEE SEEDS
AT
**SRI SHARADA COFFEE WORKS,**
17) MERCARA.
AND
MAKE YOUR COFFEE SUPERIOR.

---

**ದಿ ನಿಖಿಲ ಕರ್ನಾಟಕ ಸೆಂಟ್ರಲ್ ಆಯುರ್ವೇದಿಕ್ ಫಾರ್ಮಸಿ, ಲಿಮಿಟೆಡ್, ಮೈಸೂರು.**

## ಇವರ ಸಿದ್ಧೌಷಧಗಳು.

1. ನಿಕಾಫ್ ಟೂತ್ ಪೌಡರ್. ಬೆಲೆ ಪೊಟ್ಣ ಒಂದಕ್ಕೆ 0–1–0
(ಹಲ್ಲುನೋವು, ಕೀವು ಮತ್ತು ರಕ್ತ ಸುರಿಯುವುದು, ನಾರುವುದು ಇತ್ಯಾದಿಗಳಿಗೆ)
2. ಪಾಮರಿ ಚೂರ್ಣ .... .... ಬೆಲೆ ಪೊಟ್ಣ ಒಂದಕ್ಕೆ 0–6–0
(ಕಜ್ಜಿ, ತುರಿ, ನಿಷಬು, ಇತ್ಯಾದಿ ಎಲ್ಲಾ ಚರ್ಮ ರೋಗಗಳಿಗೆ)
3. ಬಾಲವರ್ಧಿನಿ ಮಿಶ್ರಣ .... ಬೆಲೆ ಬಾಟ್ಲಿ ಒಂದಕ್ಕೆ 1–4–0
(ಮಕ್ಕಳ ದುರ್ಬಲತೆ, ಹೊಟ್ಟೆಯುಬ್ಬರ, ಅಜೀರ್ಣ ಮತ್ತು ವಾತ ಇತ್ಯಾದಿಗಳಿಗೆ)
4. ದ್ರಾಕ್ಷಾರಿಷ್ಟ .... .... ಬೆಲೆ ಒಂದು ಬಾಟ್ಲಿಗೆ 2–6–0
ರಕ್ತಕಾಸ, ಕ್ಷಯ, ಹೃದಯ ದೌರ್ಬಲ್ಯ, ಕಾಶ್ಯಗಳಿಗೆ)

ಉಚಿತ ಕ್ಯಾಟಲಾಗಿಗೆ ಬರೆಯಿರಿ—

**ಸೋಲ್ ವಿಜೆಂಟ್ಸ್** (ಮೈಸೂರು ಮತ್ತು ಕೊಡಗು)
ದಿ ಅಶ್ವಿನಿ ಮೆಡಿಕಲ್ ಹಾಲ್,
2) 215, ಸುಲ್ತಾನ್ ಪೇಟೆ, ಬೆಂಗಳೂರು ಸಿಟಿ.

---

**ಧಾತು ವೃದ್ಧಿ ರಸಾಯನ (ZANDU)**

**"ರ್ಯಾಕ್ಟೋ—ಫಾಸ್‌ಫೋ—ಮೂಲ್ಟ್"**

ಎಂಬ ಪ್ರಸಿದ್ಧ ಡಕ್ಟರುಗಳು ಮುಕ್ತ ಕಂಠದಿಂದ ಹೊಗಳುತ್ತಿದ್ದಾರೆ.

ಈ ರಸಾಯನ } ಕಾಯಿಲೆಯವರಿಗೆ, ಆರೋಗ್ಯದಿಂದಿರುವವರಿಗೆ, ಧಾತು ಕ್ಷೀಣತೆಯುಳ್ಳವರಿಗೆ, ರೋಗ ನಿವೃತ್ತಿಯಾಗಿ ಸುಧಾರಿಸಿಕೊಳ್ಳುವವರಿಗೆ, ಅಶಕ್ತರಿಗೆ-ಟಾನಿಕ್.

ವಿದ್ಯಾರ್ಥಿಗಳಿಗೆ, ವಕೀಲರಿಗೆ, ವೈದ್ಯರಿಗೆ, ಡಾಕ್ಟರರಿಗೆ, ಶ್ರಮ ಜೀವಿಗಳಿಗೆ, ರೋಗಿಗಳಿಗೆ, ನಿರೋಗಿಗಳಿಗೆ, ಗೃಹಸ್ಥಾಶ್ರಮಿಗಳಿಗೆ, ಬ್ರಹ್ಮಚಾರಿಗಳಿಗೆ, ಸ್ತ್ರೀಯರಿಗೆ, ಪುರುಷರಿಗೆ—ಎಲ್ಲರಿಗೂ ಬೇಕಾದ ರಸಾಯನವಿದು. ಇದು ಜಠರಾಗ್ನಿಯನ್ನು ಸರಿಪಡಿಸುವುದು. ನೆದುಳಿಗೆ ತಂಪನ್ನುಂಟುಮಾಡುವುದು, ನಾಲಿಗೆಗೆ ರುಚಿಯಾಗಿರುವುದು. ಇದರಲ್ಲಿ ನವಜೀವನಕರವಾದ ಎಲ್ಲಾ ವಿಟಮಿನ್ನುಗಳು ಕೆಂಪು ರಕ್ತ ಕಣಗಳನ್ನು ಹೆಚ್ಚಿಸುವ ಅಮೂಲ್ಯ ಔಷಧಿಗಳವೆ.

ಇದರಲ್ಲಿ ಇಲೆಕ್ಟರ್ ಫಾಸ್‌ಫೋನೂಲ್ಟ್, ಹೆಮೊಫ್ಲೋಬಿನ್, ಸೋದಿಗ್ಲಿಸರೊ ಫಾಸ್‌ಫೇಟ್ ಹೈಪ್ಸಿನ್, ಸಾಲ್ಟ್ ಮೂಲ್ಟ್ ಎಕ್ಸ್‌ಟ್ರಾಕ್ಟ್, ದಾಕ್ಷಾಸವ ಮೊದಲಾದ ಪ್ರಸಿದ್ಧ ಔಷಧಿಗಳಂಶವಿದೆ. ಇಂದಿನಿಂದಲೇ ಸೇವಿಸಿ ಅನುಭವ ಪಡೆಯಿರಿ. ಇದು ಎಲ್ಲಾ ಪ್ರಸಿದ್ಧ ಔಷಧಿಷಾಪುಗಳಲ್ಲಿದೆ.

**ಝಂಡು ಫಾರ್ಮಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್,**
20) ಗೋಖಲೆ ರೋಡ್, ಬೋಂಬೆ.

## The Canara Banking Corporation Limited.

(Incorporated in British India Liablity of Memters is Limited)
15) ESTD—1906.

**Head Office: U D I P I, South Kanara.**

| | | |
|---|---|---|
| Authorised Capital | .... | Rs. 25,00,000 |
| Issued & Subscribed Capital | .... | Rs. 16,00,000 |
| Paid up capital | .... | Rs. 14,76,355 |
| Reserves | .... | Rs. 4,14,302 |

**Total Working Capital Exceeds:**
**ONE CRORE & 35 LAKHS.**

## ದಿ ಬೋಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.

— ಬೇಕಾಗಿದ್ದಾರೆ —

**ಜನಬಳಿಕೆಯಿರುವ ಕಾರ್ಯಚತುರ ಏಜೆಂಟರು ಲಾಭದಾಯಕ ಶರತ್ತುಗಳ ಮೇಲೆ ಕೊಡಗಿನ ಉದ್ದಗಲಕ್ಕೂ ಬೇಕಾಗಿದ್ದಾರೆ. ಯೋಗ್ಯತೆ, ವಯಸ್ಸುಗಳನ್ನು ಸೂಚಿಸಿ ಬರೆಯಿರಿ.**

## ಕೊಚ್ಚಿಕಾರ್ ಬ್ರದರ್ಸ್, ಲಿ.

ಮದ್ರಾಸ್ ಬ್ರಾಂಚಿನ ಸೆಕ್ರೆಟರಿಗಳು.
19) ಪಿ. ಬಿ. ನಂ. 337, ಮದ್ರಾಸು.

## ಎಂಪೈರ್ ಆಫ್ ಇಂಡಿಯಾ
## ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

4) ಸ್ಥಾಪನೆ:—೧೮೯೭.

| | | |
|---|---|---|
| ಳಿನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು. | ಒಟ್ಟು ಆದಾಯ | ೯೭,೩೭,೦೦೦ ರೂಪಿದೆ |
| | ಚಾಲ್ತಿಯಿರುವ ವಿಮೆ | ೧೬,೪೯,೮೮,೦೦೦ ,, |
| | ಆಸ್ತಿ .... .... | ೬,೩೦,೪೬,೮೦೦ ,, |
| ಕಂಪೆನಿಯ ಆದಿಯಲ್ಲಿ ಕೊಟ್ಟ ಕ್ಲೈಮುಗಳು | | ೮,೩೮,೦೦,೦೦೦ ,, |

| ಅಂಗ ಕಛೇರಿ: | ಏಜೆನ್ಸಿ | ಪ್ರಧಾನ ಕಛೇರಿ: |
|---|---|---|
| ಡಿಸ್ಪೆನ್ಸ್ಸರಿ ಬೋರ್ಡ್ ಬಿಲ್ಡಿಂಗ್, | ಆರ್ಜಿಗಳನ್ನು | ಎಂಪೈರ್ ಆಫ್ ಇಂಡಿಯಾ |
| ಕೆಂಪೇಗೌಡ ರಸ್ತೆ, ಬೆಂಗಳೂರು. | ಸ್ವಾಗತಿಸಿದೆ. | ಲೈಫ್ ಬಿಲ್ಡಿಂಗ್ ಬೋಂಬೆ |

## "ಟ್ರಾಪಿಕಲ್"

**ಪಂ. ನೋತಿಲಾಲ್ ನೆಹರೂ, ಹಕೀಮ್ ಅಜಮಲ್ ಖಾನ್, ಡಾ. ಯಂ. ಎ. ಅನ್ಸಾರಿ, ಸುಬಾಶ ಚಂದ್ರ ಬೋಸ್**

ನೊದಲಾದ ರಾಷ್ಟ್ರೀಯ ಧುರೀಣರಿಂದ ಸ್ಥಾಪಿಸಿ,

**ಬೆಳೆಸಲ್ಪಟ್ಟ ರಾಷ್ಟ್ರೀಯ ವಿಮಾ ಸಂಸ್ಥೆ.**

ಜೀವನ ಸಂಧ್ಯಾ ಕಾಲದಲ್ಲಿ ಜೀವವಿಮೆಯೇ ನಿಮ್ಮನ್ನು ರಕ್ಷಿಸುವದು. ಆದ್ದರಿಂದ ಹಿಂದೂ ದೇಶದ ರಾಷ್ಟ್ರೀಯ ಸಂಸ್ಥೆಗಳಲ್ಲಿ ಹಿರಿದಾದ **ಟ್ರಾಪಿಕಲಿನಲ್ಲಿ** ವಿಮೆ ಮಾಡಿರಿ.

**ಮುಖ್ಯ ಖಜೇರಿ: ಹೊಸ ಡಿಲ್ಲಿ] [ಹೆಚ್ಚಿನ ಮಾಹಿತಿಗೆ ಈ ಪತ್ತೆಗೆ ಬರೆಯಿರಿ:**
**ಯಂ. ಯು. ಅಚ್ಚಣ್ಣ, ಇನ್ಸ್‌ಪೆಕ್ಟರ್. ಯಂ. ರಂಗನಾಥಶೆಟ್ಟಿ,**
1) ಮಡಿಕೇರಿ. OR ಬ್ರಾಂಚ್ ಮೇನೇಜರ್, ಮಂಗಳೂರು.

## ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ.ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ವಸೂಲಾದ ಶೇರ್ ಬೊಬಲಗು ರೂ. 95,0೮0, ಜಮಾ ಬಂದ ಠೇವಣಾತಿ 2,24.75೨ ವಸೂಲಾದ ಕ್ಷೇಮನಿಧಿ 2,16,209, ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು 2,02,925.

ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ ಡಿಪಾಜಿಟ್ಟುದಾರರಿಗೆ ಅವರ ಡಿಪಾಜಿಟ್ಟು ಆಧಾರದ ಮೇಲೆ 90% ಕೊಡಲಾಗುತ್ತೆ. ನಿರಖು ಠೇವಣಾತಿಗಳಿಗೆ ಒಂದು ವರ್ಷದಿಂದ ಮೂರು ವರ್ಷಗಳ ವರೆಗೆ ಶೇಕಡ 2. ಮೂರು ವರ್ಷಗಳಿಂದ ಐದು ವರ್ಷಗಳ ವರೆಗೆ 2½. ಐದು ವರ್ಷಗಳಿಂದ ಹತ್ತು ವರ್ಷಗಳ ವರೆಗೆ 3½. ಹತ್ತು ಅದಕ್ಕಿಂತ ಮೇಲ್ಪಟ್ಟವುಗಳಿಗೆ 4½. ಸೇವಿಂಗ್ಸ ಬ್ಯಾಂಕ್ (on daily balance) ಡಿಪಾಜಿಟ್ಟುಗಳಿಗೆ ಶೇಕಡ 0—8—0. ವರ್ಷಕ್ಕೊಮ್ಮೆ ರಿಜಿಸ್ಟ್ರಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ.


Edited, Printed and Published by P. I. Belliappa at 'Kodagu' Press, Mercara, for 'Kodagu' Ltd.

# ಜರ್ಮನಿಯ ಸಿದ್ಧತೆ-ಜಪಾನರ ಗುಪ್ತಾಸ್ತ್ರ?

## ಜಪಾನಿನ ಮೇಲೆ ರಷ್ಯಾ ಕೈಯಿತ್ತುವದೇ?

— ಲೇ:—'ಗುಪ್ತ' —

ಜಾಗೃತಿಕ ಯುದ್ಧವು ನಾಝಿಗಳಿಗೆ ಸ್ವಲ್ಪ ಪ್ರತಿಕೂಲವಾಗಿ ನಡೆಯುತ್ತಿದೆ ರಷ್ಯನರು ಮಹಾನೇಗದಿಂದ ಪೂರ್ವಭಾಗದಿಂದ ಮುನ್ನುಗ್ಗುತ್ತಿದ್ದಾರೆ. ಈ ವುಧ್ಯೆ ಮಿತ್ರಶಿಬಿರದ ಮುಂದಾಳುಗಳು ಕ್ರಿಮಿಯೂದ್ವೀಪದ ಯೂಲ್ಟಾ ಎಂಬಲ್ಲಿ ಸೇರಿ ಪರಾಜಿತ ಜರ್ಮನಿಗೆ ಯೂವ ರೀತಿಯ ಉಪಚಾರಮೂಡಬೇಕೆಂದು ತೀರ್ಮಾನಿಸಿರುವರು. ಜರ್ಮನಿಯಿಂದ ನಾಝಿಪಕ್ಷವನ್ನು ಕಿತ್ತೊಗೆದು ಜರ್ಮನಿಯನ್ನು ಹರಿದು ತುಂಡರಿಸಿ ತಮ್ಮ ಹತೋಟಿಯಲ್ಲಿಟ್ಟುಕೊಂಡು ಮುಂದೆ ಜರ್ಮನಿಯು ಯುದ್ಧಕ್ಕೆ ಕಾರಣವಾಗದಂತೆ ಕೆಳಗೊತ್ತುವದು ಆವಶ್ಯವೆಂದು ತೀರ್ಮಾನಿಸಿರುವರು. ಈ ತೀರ್ಮಾನಗಳು ಪುನಹ ಯುದ್ಧಕ್ಕೆ ಬೀಜಾಣುಗಳಾಗಿ ಪರಿಣಮಿಸಲಾರವೇ ಎಂದು ಹಲವರು ಕೇಳುತ್ತಿದ್ದಾರೆ. ಸದ್ಯಕ್ಕೆ ಆ ವಿಚಾರ ಒತ್ತಟ್ಟಿಗಿರಲಿ. ಮಿತ್ರರಿಂದ ಒಂದು ವೇಳೆ ಜರ್ಮನಿಯು ಸೋಲಿಸಲ್ಪಟ್ಟರೆ ಜರ್ಮನರು ಏನು ನೂಡಿಯಾರು? ಇದಕ್ಕೆ ಅವರು ತಯಾರಾಗಿರುವರೇ ಎಂಬುದನ್ನು ವಿಚಾರಿಸಿ ನೋಡಿದರೆ ಆಸಾಧ್ಯವಾದ ಯೋಜನೆಗಳನ್ನು ಅವರು ಮೂಡುತ್ತಿರುವದು ಕಂಡುಬರುವದು. ಪ್ರತ್ಯಕ್ಷಸೋಲನ್ನು ಪಡೆದರೆ ಆ ನಂತರವೂ ಕೂಡ ಸಮಯಸಾಧಿಸಿ ಪುನಹ ಜರ್ಮನಿಯಲ್ಲಿ ನಾಝಿಪಂಗಡವು ಮೆರೆದಾಡುವಂತೆ ಮೂಡಲು ಅವಶ್ಯವಿರುವಉಪಾಯಗಳನ್ನು,ಚುಟುಕುವಟಕೆಗಳನ್ನು ಅವರು ಅನುಸರಿಸುತ್ತಿತ್ತಿದ್ದಾರೆ. ಈ ಗುಪ್ತ ಚಟುವಟಕೆಗಳು ಬಹು ಬಿರುಸಿನಿಂದ ನಡೆಯುತ್ತಿವೆ. ಹಿಟ್ಲರ್ ಮತ್ತಿತರ ನಾಝಿ ಮುಂದಾಳುಗಳು ಸೇರಿ ರಚಿಸಿರುವ ಈ ಗುಪ್ತ ಯೋಜನೆಯಲ್ಲಿ ಎರಡು ಭಾಗಗಳಿವೆ. ಸಂಯುಕ್ತರಾಷ್ಟ್ರಗಳು ಜರ್ಮನಿಯನ್ನು ಒಂದು ವೇಳೆ ಆಕ್ರಮಿಸಿದಾಗ ಗುಡ್ಡಕಾಡುಗಳಿಂದ ಅವರ ಮೇಲೆ ಗತ್ತುಗಾರಿಕೆಯ (ಗೊರಿಲ್ಲಾ) ಯುದ್ಧ ನೂಡುವದು ಒಂದು ಭಾಗ. ಆಕ್ರಮಿತ ರಾಷ್ಟ್ರಗಳು ಈಗ ನಡೆಸಿರುವ ಮತ್ತು ನಡೆಸುತ್ತಿರುವ ತಮಗೆ ವಿರುದ್ಧವಾದ ಗುಪ್ತ ಕಾರ್ಯಗಳನ್ನು ಅಭ್ಯಾಸ ನೂಡನದು ಮತ್ತೊಂದು ಭಾಗ. ಈ ವಿಧಾನಗಳನ್ನು ನೂಡಿ ಎರಡು ವರ್ಷಗಳಾಗುತ್ತಾ ಬಂತು. 1918 ರ ನಂತರ ಜರ್ಮನಿಯ ಕೆಲವು ಭಾಗಗಳನ್ನು ಗದರಿಕೆಬೆದರಿಕೆಗಳಿಂದ ತಮ್ಮ ವಶವಿಟ್ಟುಕೊಂಡಂತೆ ಈಗ ಯುದ್ಧದಲ್ಲಿ ಸೋಲುಸಂಭವಿಸಿದ್ದೇ ಆದರೆ 1918 ರ ಪುನರಾವರ್ತನೆಯನ್ನು ನೂಡಿ ಜರ್ಮನಿಯ ಕೆಲವು ಭಾಗವನ್ನಾದರೂ ತಮ್ಮ ಪಕ್ಷದ ವಶವಿಟ್ಟುಕೊಳ್ಳುವ ನಿರ್ಧಾಡುಮೂಡಲು ಜನರಿಗೆ ಶಿಕ್ಷಣಕೊಡಲ್ಪಡುತ್ತಿದೆ. ಒಟ್ಟಾಗಿ ಜರ್ಮನಿಯು ಸೋಲಿಸಲ್ಪಟ್ಟರೆ ಜರ್ಮನಿಯ ತುಂಬ ಗಲಾಟೆ ಎಬ್ಬಿಸಿ, ಬಂಡಾಯಹೂಡಿಸಿ ನಾಝಿಗಳಲ್ಲದೆ ಇತರರಾರೂ ಜರ್ಮನಿಯನ್ನು ಹಿಡಿತದಲ್ಲಿಟ್ಟುಕೊಳ್ಳಲಾರದಂತೆ ನೂಡುವದು ಇವರ ಧ್ಯೇಯವಾಗಿದೆ ಇಂದು ನಡೆಯುತ್ತಿರುವ ಯುದ್ಧವು ಕೊನೆಗೊಂಡಾಗ ಎಷ್ಟೇ ಜರ್ಮನರು ನಾಶವಾದರೂ ಸುಮಾರು 60 ಲಕ್ಷ ನಾಝಿ ಪಂದವರು ಉಳಿದೇ ಉಳಿಯಬಹುದೆಂದು ಅಂದಾಜು ಡಲಾಗಿದೆ. ಇವರು ತಮ್ಮ ಪಂಗಡದ ಎಲ್ಲ ಚಿಗಳನ್ನು ಮರೆಸಿ ಜನತೆಯಲ್ಲಿ ಮಿಳಿತರಾಗಿ ಎಲ್ಲ ರೀತಿಯಿಂದಲೂ ಸಂಯುಕ್ತರಾಷ್ಟ್ರಗಳಿಗೆ ತೊಂದರೆ ನೂಡುವದರಲ್ಲಿ ಸಂಶಯವಿಲ್ಲ. ನಾಝಿಗಳು ಈ ಫಿಫ್ತ್‌ಕಲಂ ವೃತ್ತಿಯಲ್ಲಿ ಬಹು ನಿಪುಣರೆಂದು ಜಗತ್ತೇ ಒಪ್ಪಿಕೊಂಡಿದೆ. ಈ ದೃಷ್ಟಿಯಿಂದಲೇ 1943 ರಿಂದ ನಿಸ್ತೃತಕಾರ್ಯ ನಡೆದಿದೆ. ನಾಝಿತತ್ವವನ್ನು ಆಮೂಲಾಗ್ರವಾಗಿ ಒಪ್ಪದವರನ್ನು ಹೊರಹೂಡುತ್ತಿರುವದಾಗಿದೆ. ಈ ಯೋಜನೆಗೆ ಸಹಾಯನೂಡುವದಕ್ಕಾಗಿ ಈಗಾಗಲೇ ಸಾವಿರಾರು ಜರ್ಮನರು ತಮ್ಮ ಪದವಿಗಳನ್ನು ತ್ಯಜಿಸಿ ಸಾಮಾನ್ಯ ಜರ್ಮನರ ವೇಶಧರಿಸಿ ಕೆಲಸಕ್ಕೆ ಪ್ರಾರಂಭಿಸಿರುವರು. ಜನರಿಗೆ ತಮ್ಮ ಗುರುತುಹತ್ತುವದೆಂದು ಶಸ್ತ್ರಕ್ರಿಯೆ ನಡೆಸಿ ಮುಖಚರ್ಮವನ್ನು ಮಾರ್ಪಡಿಸಿಕೊಂಡವರಿದ್ದಾರೆ. ಸ್ಥಾಯದ ಸತ್ತೆವೆಂದು ಪ್ರಸಿದ್ಧಿಸುವದು, ಸಂಯುಕ್ತರಾಷ್ಟ್ರದ ಸೈನಿಕರ ಉಡುಪು ಸಂಗ್ರಹಿಸುವದು ಮೊದಲಾದ ಕಾರ್ಯವನ್ನು ಇವರು ನೂಡುತ್ತಿದ್ದಾರೆ.

ಗತ್ತುಗಾರಿಕೆಯ ಯುದ್ಧ ಶಿಕ್ಷಣ ಕೊಡಲಿಕ್ಕಾಗಿ 1944 ರಲ್ಲಿ 50 ಶಾಲೆಗಳನ್ನು ತೆರೆದಿರುವರು. ತಟಸ್ಥರಾಷ್ಟ್ರಗಳಲ್ಲಿ ಪ್ರಚಾರನಡೆಸಲು ಬೇಕಾಗುವ ಹಣವನ್ನು ಠೇವಣಾತಿಯೊಗಿಟ್ಟು ಕೆಲಸ ನೂಡುತ್ತಿದ್ದಾರೆ. ಗುಪ್ತಾಸ್ತ್ರಗಳನ್ನು ರಚಿಸುವ ವಿಧಾನಗಳನ್ನು ಬರೆದು ಎಲ್ಲೆಲ್ಲೂ ಹೂತಿಟ್ಟಿದ್ದಾರೆ. ಒಂದು ವೇಳೆ ಗುಪ್ತಾಸ್ತ್ರ ರಚಿಸಿದ ವಿಜ್ಞಾನ ಶಾಸ್ತ್ರಜ್ಞರು ಯುದ್ಧದಲ್ಲಿ ಮೃತರಾದರೂ ಮುಂದೆ ಈ ಅಸ್ತ್ರಗಳನ್ನು ತಯಾರಿಸಲು ಅನುಕೂಲವಾಗುವಂತೆ ಈ ವಿಧಾನ ನೂಡಿದ್ದಾರೆ. ಅಂತರಿಕವಾದ ಈ ಎಲ್ಲಾ ವಿಧಾನಗಳನ್ನು ನೂಡುತ್ತಾ ಜರ್ಮನಿಯ ರಣರಂಗದಲ್ಲಿ ಮಿತ್ರರಾಷ್ಟ್ರಗಳನ್ನು ಎದುರಿಸುತ್ತಿದೆ.

ಈಗ ನಡೆಯುತ್ತಿರುವ ಪಶ್ಚಿಮರಂಗದ ಯುದ್ಧವು ಜರ್ಮನಿ ಕದನದ ಕಡೇ ಅಂಕವೆಂದು ಹೇಳಲಾಗುತ್ತಿದೆ. ಈ ಕಡೇ ಅಂಕ ಪ್ರಾರಂಭವಾಗಿ ಬಹಳ ದಿನಗಳಾದವು. ಆದರೂ ಅಂಕದ ಅಂತ್ಯವೊವಾಗ ಆಗಬಹುದೆಂಬುದೇ ಎಲ್ಲರ ಪ್ರಶ್ನೆಯೊಗಿದೆ. ನಾಝಿಗಳು ಸುಲಭದಲ್ಲಿ ಶರಣುಬಾರರು ಎಂಬುದನ್ನು ಕಳೆದ ವಾರ ಬರೆದಿದ್ದೆನು. ಈ ವಾರದ ಘಟನೆಗಳೂ ಆದಕ್ಕೆ ಸಮರ್ಥನೆಯನ್ನೀಯುತ್ತಿವೆ. ಮಿತ್ರರನ್ನು ವಿಶಾಲ ರೀತಿಯಿಂದ ಎದುರಿಸಲಾರದೆ ಒಂದು ವೇಳೆ ಜರ್ಮನ್ ಸೇನೆಗಳು ಅವ್ಯವಸ್ಥೆಗೊಳಗಾದರೂ ಯುದ್ಧದ ಅಂತ್ಯವಾದಂತಾಗದು. ಜರ್ಮನರು ತಮ್ಮ ಗೊರಿಲ್ಲಾ ಯುದ್ಧಕ್ರಮದಿಂದ ಯುದ್ಧದ ಅಂತ್ಯವನ್ನು ಇನ್ನೂ ಮುಂದಕ್ಕೆ ದೂಡಬಹುದು. ಪೂರ್ವದಲ್ಲಿ ರಷ್ಯನರು ಮುಂದರಿಯುತ್ತಿದ್ದಾರೆ. ಬರ್ಲಿನು ಬೇಗನೆ ಅವರ ವಶವಾಗುವದೆಂದು ಹೇಳುತ್ತಿದ್ದಾರೆ. ಆದರೆ ಯಾವಾಗವೆಂದು ನಿಶ್ಚಯವಾಗಿ ಹೇಳಲಾಗುವದಿಲ್ಲ. ಫೆಬ್ರುವರಿ 23 ರಲ್ಲಿ ಬರ್ಲಿನ್ನನ್ನು ವಶಪಡಿಸುವದಾಗಿ ರಷ್ಯನರು ಹೇಳಿದ್ದರು. ಆದರೆ ಅವರು ಬರ್ಲಿನಿನಿಂದ ಮೂವತ್ತು ಮೈಲುಗಳ ದೂರದಲ್ಲಿಯೇ ಇದ್ದಾರೆ. ಬುಡಾಪೆಸ್ಟ್ ನಗರಬಂದನ್ನು ವಶಪಡಿಸಲು ರಷ್ಯನರಿಗೆ 3 ತಿಂಗಳ ಆವಧಿ ಬೇಕಾಯಿತು. ಹ್ಹಾಗಿರುವಾಗ ಬರ್ಲಿನನ್ನು ಸುಲಭದಲ್ಲಿ ವಶಪಡಿಸುವದು ಕನಸಿನನೂತು. ಈ ವಾರ ಜರ್ಮನರು ಇಟೆಲಿಗಡಿಯಲ್ಲಿ ಬಹು ಚಟುವಟಿಕೆವಹಿಸಿದ್ದಾರೆ. ಪಶ್ಚಿಮದಲ್ಲಿ ಜರ್ಮನರ ಸೀಜ್‌ಫ್ರೈಡ್ ಕೋಟೆಯನ್ನು ಮುರಿಯುವದು ಮಿತ್ರರಿಂದಾಗಿಲ್ಲ. ಬದಲು ಈ ವ್ಯೂಹವನ್ನು ಜರ್ಮನರು ಹೆಚ್ಚು ಬಲಗೊಳಿಸಿ ವಿಸ್ತರಿಸಿರುವರು. ಇದನ್ನು ಮುರಿಯುವದು ಬಹು ಪ್ರಯಾಸದ ನಿಚಾರವೇ.

ಪೂರ್ವದಲ್ಲಿ ಜಪಾನರ ವಿಚಾರದಲ್ಲಿ ಈಗ ಹೊಸ ವಿಚಾರಗಳು ಹೊರಬರುತ್ತಿವೆ. ಜಪಾನು ತಟಸ್ಥವಾಗಿ ನಿದ್ರಿಸುತ್ತಿದೆಯೆಂದು ಯೂರೋಭಾವಿಸಭಾರದೀ ಅದರ ಹಡಗುಸಜೆಯಲ್ಲಿ ಬಹು ಅಭಿವೃದ್ಧಿಯೊಗಿ ಗುಪ್ತವಾಗಿಡಲ್ಪಟ್ಟಿದೆ. ಇತ್ತಲಾಗಿ ಜರ್ಮನಿಯಂತೆಯೆ ದೂ ಗುಪ್ತ ಅಸ್ತ್ರಗಳನ್ನು ಕಂಡುಹಿಡಿದು ಆದರಲ್ಲಿ ಬಂದು-ಮೂತ್ರ ಬೆಳಕಿಗೆ ಬಂದಿದೆ. ಅದೇನೆಂದರೆ ಭಯಂಕರವಾದ ಸ್ಫೋಟಕ ಮತ್ತು ಅಗ್ನಿಜನಕ ಬಾಂಬುಗಳು. ಈ ಬಾಂಬುಗಳು ಅಮೇರಿಕದ ಅನೇಕ ಭಾಗಗಳಲ್ಲಿ ಕ್ಷಾಮು ಮತ್ತಿತರ ಕಡೆಯ ಜೆಂಕಿಗೆ ಕಾರಣವಾಗಿವೆಯೆಂತೆ. ಬಹು ದೂರಕ್ಕೆ ಇವೆನ್ನು ಉಪಯೋಗಿಸಬಹುದಲ್ಲದೆ ಇದರಿಂದ ವಿಪರೀತ ಹಾನಿಯನ್ನೂ ನೂಡಬಹುದಂತೆ.

ಇತ್ತಲಾಗಿ ಮತ್ತೊಂದು ವಾರ್ತೆ ಹಬ್ಬಿದೆ. ಏನೆಂದರೆ ಅಮೇರಿಕಾವು ಜಪಾನರ ಕೈಯಿಂದ ಫಿಲಿಫೈನನ್ನು ಪುನಹ ವಶಪಡಿಸಿಕೊಂಡಿರುವದರಿಂದ ಅಲ್ಲಿಗೇ ತನ್ನ ಯುದ್ಧ ಮುಗಿಯಿತೆಂದೂ, ಮುಳುಯೂ, ಬರ್ಮಾ, ಇಂಡೋಚೈನಾ ನೊದಲಾದ ಕಡೆ ತಮ್ಮ ರಕ್ತ ಚೆಲ್ಲಿ ಅವುಗಳನ್ನು ಬ್ರಿಟನಿಗೆ ಬಿಟ್ಟು ಕೊಡುಪ ಅವಶ್ಯಕತೆಯಿಲ್ಲವೆಂದೂ ಆದ್ದರಿಂದ ಅಮೇರಿಕದ ಶಾಂತಸಾಗರ ಯುದ್ಧವು ಮುಗಿಯಿತೆನ್ನ ಬಹುದೆಂದೂ ಅಮೇರಿಕದ "ಡೈಲಿ ನ್ಯೂಸ್" ಎಂಬ ಪತ್ರಿಕೆಯು ಬರೆದಿದೆ. ಇದೇ ರೀತಿಯಲ್ಲಿ ಹಲವು ಅಮೇರಿಕನರ ಅಭಿಪ್ರಾಯವಿದೆಯಂತೆ. ಆದರೆ ಇದನ್ನು ನಂಬಲಾಗುವುದಿಲ್ಲ. ಯಕೆಂದರೆ ಹಾಗೆ ನೂಡಿದರೆ ಮಿತ್ರರಾಷ್ಟ್ರಗಳಿಗೆ ದೊಡ್ಡ ಗಂಡಾಂತರ ಸಂಭವಿಸುವದು. ನೊನ್ನೆಯೊಗಿ ನಡೆದ ಯಲ್ಟಾ ಸಮ್ಮೇಳನದಲ್ಲಿ ಒಂದು ತೀರ್ಮಾನವಾಗಿ ರಷ್ಯಾವು ಜಪಾನರ ಮೇಲೆ ಯುದ್ಧ ಹೂಡ ಬಹುದೆಂದು ಹೇಳಲಾಗುತ್ತಿದೆ. ಆದರೆ ಇದು ಎಷ್ಟು ಸತ್ಯನೋ ಹೇಳ ಬರುವದಿಲ್ಲ. ಇದಕ್ಕೆ ಪ್ರತಿಫಲವಾಗಿ ರಷ್ಯಕ್ಕೆ ಮಂಚೂರಿಯೂ ಮೊದಲಾದ ಭಾಗಗಳನ್ನು ಬಿಟ್ಟುಕೊಡುವ ಮಾತು ಕತೆ ಯೂಗಿದೆಯಂತೆ. ಆದರೆ 1942 ರಲ್ಲಿ ರಷ್ಯವು ಗಂಡಾಂತರದಲ್ಲಿದ್ದಾಗ ರಷ್ಯಾ ಜಪಾನುಗಳೊಳಗಿನ ಒಪ್ಪಂದದಂತೆ ಜಪಾನು ರಷ್ಯಾದ ಬೆನ್ನಿಗಾಗಿ ತಿರಿಯದೆ ಸುಮ್ಮನಿತ್ತು. ಆದರೆ ಈಗ ರಷ್ಯಾವು ಆ ಒಪ್ಪಂದವನ್ನು ಮುರಿದು ಜಪಾನರ ಮೇಲೇರಿ ಬರುವದೇ ಎಂಬುದು ಸಂಶಯದ ವಾತು. ಹೇಗೂ ನುಂದೆ ನಿರೀಕ್ಷಿಸುವಾ.